BD/2911/16

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\2911\2016\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:31/10/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ದೂರುದಾರರಾದ ಶ್ರೀಮತಿ.ಪಾರ್ವತಮ್ಮ ಕೋಂ ವಿ.ಎಂ.ನಾರಾಯಣಪ್ಪ, ಗಿರಿಸಂದ್ರ, ವೇಮಗಲ್ ಹೋಬಳಿ, ಮದ್ದೂರೆ ಅಂಚೆ, ಕೋಲಾರ ತಾಲ್ಲೂಕ್ ಮತ್ತು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ವೇಮಗಲ್ ಹೋಬಳಿ ಮದ್ದೂರೆ ಅಂಚೆ ಗಿರಿಸಂದ್ರ ನಿವಾಸಿಯಾದ ಶ್ರೀಮತಿ.ಪಾರ್ವತಮ್ಮ ಕೋಂ ವಿ.ಎಂ.ನಾರಾಯಣಪ್ಪ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ತಹಶೀಲ್ದಾರ್ (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ಮಲ್ಲಾಂಡಹಳ್ಳಿ ಗ್ರಾಮದ ಸರ್ವೆ ನಂ.41ರಲ್ಲಿ ತಾವು ಮತ್ತು ತಮ್ಮ ಪತಿ ಶ್ರೀ.ಬಿ.ಎಂ.ನಾರಾಯಣಪ್ಪ ರವರು ಸುಮಾರು 30 ವರ್ಷಗಳಿಂದಲೂ ಅನಧಿಕೃತ ಸಾಗುವಳಿ ಮಾಡುತ್ತಿದ್ದು, ತಮ್ಮ ಸ್ವಾಧೀನಾನುಭವದಲ್ಲಿದ್ದ ಜಮೀನನ್ನು ಎದುರುದಾರರು, ಅಧ್ಯಕ್ಷರು, ಓಂಕಾರ ಆಶ್ರಮ, ವೇಮಗಲ್ ರವರಿಗೆ ಮಂಜೂರು ಮಾಡಿದ್ದು, ಸದರಿ ಆದೇಶದ ವಿರುದ್ಧ ತಮ್ಮ ಪತಿ ಶ್ರೀ.ಬಿ.ಎಂ.ನಾರಾಯಣಪ್ಪ ರವರು ಕರ್ನಾಟಕ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿ ಸಂ:92/2002ರಂತೆ ಸಲ್ಲಿಸಿದ್ದು, ನ್ಯಾಯಮಂಡಳಿ ಸದರಿ ಜಮೀನನ್ನು ತಮಗೆ ಮಂಜೂರು ಮಾಡಲು ಕ್ರಮ ಕೈಗೊಳ್ಳುವಂತೆ ಕೋಲಾರ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದು, ಸದರಿ ಆದೇಶದ ವಿರುದ್ಧ ಅಧ್ಯಕ್ಷರು, ಓಂಕಾರ ಆಶ್ರಮ ರವರು ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ರವರಲ್ಲಿ ರಿಟ್ ಅರ್ಜಿ ಸಂ:44303/2002ರಂತೆ ಸಲ್ಲಿಸಿದ್ದು, ನ್ಯಾಯಾಲಯವು ಅನುಭವದಂತೆ ಮಂಜೂರು ಮಾಡಲು ಜಿಲ್ಲಾಧಿಕಾರಿಗಳಿಗೆ ಆದೇಶಿಸಿದ್ದು, ಆದರೆ ಈವರೆವಿಗೂ ಸಹ ಮಂಜೂರು ಮಾಡಿಲ್ಲ. ಈ ಸಂಬಂಧವಾಗಿ, ದಿ:27/08/16ರಂದು ಜಿಲ್ಲಾಧಿಕಾರಿಯವರಿಗೆ ಅರ್ಜಿ ಸಲ್ಲಿಸಿದ್ದು, ಕಳೆದ 3 ವರ್ಷಗಳಿಂದಲೂ ಸಹ ಸದರಿ ಜಮೀನನ್ನು ಮಂಜೂರು ಮಾಡದೇ ತೊಂದರೆ ನೀಡಿರುವುದಾಗಿ ಹೇಳಿಗ್ದಾರೆ.

Sd/-

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ಸದರಿ ಜಮೀನನ್ನು ಮಂಜೂರು ಮಾಡುವ ವಿಚಾರದಲ್ಲಿ ಶ್ರೀಮತಿ.ಲಕ್ಷ್ಮಮ್ಮ ಎಂಬುವವರು ತಕರಾರು ಅರ್ಜಿಯನ್ನು ಸಲ್ಲಿಸಿದ್ದಾರೆ. ಸದರಿ ಅರ್ಜಿಗೆ ಸಂಬಂಧಪಟ್ಟಂತೆ, ಉಪ ತಹಶೀಲ್ದಾರ್ ಹಾಗೂ ಮೋಜಣಿದಾರರು ಜಂಟಿ ಸ್ಥಳ ತನಿಖೆ ಮಾಡಿ, ಎಷ್ಟು ಜನ ಅರ್ಜಿದಾರರು ನಮೂನೆ–50 ಮತ್ತು 53ನ್ನು ಸಲ್ಲಿಸಿ ಅನುಭವದಲ್ಲಿದ್ದಾರೆ? ಎಂಬ ಬಗ್ಗೆ ಜಂಟಿ ಸ್ಥಳ ತನಿಖೆ ಮಾಡಿ, ಸರ್ವೆ ನಕ್ಷೆಯೊಂದಿಗೆ ಸಲ್ಲಿಸಲು ದಿ:17/04/17ರಂದು ಪ್ರಸ್ತಾವನೆ ಸಲ್ಲಿಸಿದ್ದಾರೆ. ನಕ್ಷೆ ಹಾಗೂ ವರದಿ ಬಂದ ಕೂಡಲೇ ನಮೂನೆ–50 ಮತ್ತು 53ನ್ನು ಪರಿಶೀಲಿಸಿ, ದೂರುದಾರರಿಗೆ ಮಂಜೂರು ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ, ಎದುರುದಾರರ ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ದೂರುದಾರರು ಸದರಿ ಸರ್ವೆ ನಂ.41ರಲ್ಲಿ ಸ್ವಾಧೀನ ಹೊಂದಿದ್ದು, ಸದರಿಯವರ ಸ್ವಾಧೀನವನ್ನು ಪರಿಗಣಿಸದೇ ಕೋಲಾರ ಜಿಲ್ಲಾಧಿಕಾರಿಯವರು ಸದರಿ ಜಮೀನನ್ನು ಅಧ್ಯಕ್ಷರು, ಓಂಕಾರ ಆಶ್ರಮ ರವರಿಗೆ ಮಂಜೂರು ಮಾಡಿದ್ದು, ಸದರಿ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಮೇಲ್ಮನವಿ ಪ್ರಾಧಿಕಾರ, ಬೆಂಗಳೂರಿನಲ್ಲಿ ಮೇಲ್ಮನವಿ ಸಂ:92/2002ರಂತೆ ಸಲ್ಲಿಸಿದ್ದು, ಸದರಿ ಮೇಲ್ಮನವಿಯು ಪುರಸ್ಕರಿಸಲ್ಪಟ್ಟಿದೆ. ಸದರಿ ಆದೇಶದ ವಿರುದ್ಧ ಅಧ್ಯಕ್ಷರು, ಓಂಕಾರ ಆಶ್ರಮ ರವರು ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯ ರವರಲ್ಲಿ ರಿಟ್ ಅರ್ಜಿ ಸಂ:44303/2002ರಂತೆ ಸಲ್ಲಿಸಿದ್ದು, ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ಪುರಸ್ಕರಿಸಿ, ಕೋಲಾರ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿ, ಕರ್ನಾಟಕ ಮೇಲ್ಮನವಿ ಪ್ರಾಧಿಕಾರದ ನಿರ್ದೇಶನದಂತೆ ಕ್ರಮ ಕೈಗೊಳ್ಳುವಂತೆ ಆದೇಶಿಸಿದೆ. ಅದರಂತೆ, ದೂರುದಾರರು ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದು, ಸದರಿಯವರು ಈವರೆವಿಗೂ ಸಹ ಸದರಿ ಜಮೀನನ್ನು ಮಂಜೂರು ಮಾಡಿಲ್ಲ. ಉಪ ತಹಶೀಲ್ದಾರ್ ಮತ್ತು ಮೋಜಣಿದಾರರು ಜಂಟಿ ಸ್ಥಳ ತನಿಖೆ ಮಾಡಿ, ಸರ್ವೆ ನಕ್ಷೆಯೊಂದಿಗೆ ವರದಿ ಸಲ್ಲಿಸಲು ಜ್ಞಾಪನ ಪತ್ರ ನೀಡಿರುವುದಾಗಿ ಹೇಳಿದ್ದಾರೆ.

BD/29.11.16

6. ಆದ್ದರಿಂದ, ದೂರುದಾರರು ಅರ್ಹರಿದ್ದಲ್ಲಿ, ಸದರಿ ಜಮೀನಿಗೆ ಮಂಜೂರಾತಿ ನೀಡುವ ಬಗ್ಗೆ ಕಾನೂನು ರೀತಿ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 3/11/17

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.